ಓ.ಎಸ್ಃ 56/2019 ಪಿಡಬ್ಲೂ-1 ನಂಜುಂಡಶೆಟ್ಟಿ

ದಿನಾಂಕಃ 25.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ ವೈ.ಎಂ.ಜೆ. ವಕೀಲರಿಂದಃ

ನನಗೆ ಮದುವೆಯಾಗಿ 22 ವರ್ಷ ಆಗಿರುತ್ತದೆ. ನನ್ನ ಹೆಂಡತಿ ಮನೆ ಕೊಮಾರನಪುರ ಗ್ರಾಮ. ಮದುವೆಯಾದ ಹೊಸದರಲ್ಲಿ ಮಾತ್ರ ಹೆಂಡತಿ ಮನೆಯಲ್ಲಿದ್ದು, ನಂತರ ಬೇರೆ ವಾಸವಾಗಿದ್ದೇನೆ. ನಾನು ಮದುವೆಯಾಗಿ ಎಂಟು ವರ್ಷಗಳಕಾಲ ಕೊಮಾರನಪುರದಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆಯ ಒಡಹುಟ್ಟಿದವರು ಒಟ್ಟು ಏಳು ಜನರು. ನನ್ನ ತಾತನ ಹೆಸರು ಪಂಡಿತ್ ಸಿದ್ದಶೆಟ್ಟಿ. ನನ್ನ ತಾತನಿಗೆ 1 ನೇ ರಂಗಶೆಟ್ಟಿ , 2 ನೇ ಮಣಿಯಮ್ಮ, 3 ನೇ ಪುಟ್ಟರಂಗಮ್ಮ, 4 ನೇ ನನ್ನ ತಂದೆ ವೆಂಕಟರಂಗಶೆಟ್ಟಿ 5 ನೇ ರಾಮಶೆಟ್ಟಿ , 6 ನೇ ಪಾಂಡುರಂಗಶೆಟ್ಟಿ ,7 ನೇ ಗೋವಿಂದಶೆಟ್ಟಿ, 8 ನೇ ನಾರಾಯಣಶೆಟ್ಟಿ , 9 ನೇ ನಂಜುಂಡಶೆಟ್ಟಿ ಮತ್ತು 10 ನೇ ದೊಡ್ಡರಂಗಮ್ಮ.

2. ಪಂಡಿತ್ ಸಿದ್ದಶೆಟ್ಟಿಯವರಿಗೆ ಜಮೀನು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ ಹತ್ತು ಜನರ ನಡುವೆ ಭಾಗವಾಗದ ಬಗ್ಗೆ ನನಗೆ ಗೊತ್ತಿಲ್ಲ. ಅವರಿಗೆ ಸಂಬಂಧಪಟ್ಟ ಆಸ್ತಿಯ ವಿವರ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಗೊತ್ತಿದೆ. ನನ್ನ ತಂದೆಗೆ ಯಾವ ಭಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ನನ್ನ ತಂದೆಗೆ ಸೇರಿದ ಆಸ್ತಿ.

3. ನಿಪಿ.2 ನನ್ನ ತಂದೆ ಕ್ರಯ ಮಾಡಿದ ಆಸ್ತಿ ಎಂದರೆ ಸರಿ. ನನ್ನ ತಂದೆ ಎಷ್ಟು ಹಣಕ್ಕೆ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.3 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ. ನನ್ನ ತಂದೆ ಎಷ್ಟು ಹಣಕ್ಕೆ ಹಾಗೂ ಯಾವಾಗ ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.